॥ ಓಂ ಶ್ರೀ ಅರ್ಕ ಮಹಾಗಣಪತಯೇ ನಮಃ ॥
॥ ಓಂ ಶ್ರೀ ಶಾರದಾ ಗುರುಭ್ಯೋ ನಮಃ ॥



ಶ್ರೀ ಅರ್ಕ ಮಹಾಗಣಪತಿ

***"ತಾಯಿಯೇ ಮೊದಲ ಗುರು, ಉತ್ತಮ ಶಾಲೆಯಿಂದಲೇ ವಿದ್ಯಾಭಿವೃದ್ಧಿ"***

- ಶ್ರೀನಿವಾಸ ಅರ್ಕ



ಶ್ರೀನಿವಾಸ ಅರ್ಕ

# ಅರ್ಕ ಮಹಾವಿದ್ಯಾಲಯ

## ಅರ್ಕಧಾಮದಲ್ಲಿ ಶುಭಾರಂಭ

ಅರ್ಕಧಾಮ, ಬೋಗಾದಿ-ಗದ್ದಿಗೆ ರಸ್ತೆ, ಕಣಿಯನಹುಂಡಿ ಗೇಟ್, ಮಾದಹಳ್ಳಿ
ಮೈಸೂರು-570026, ಕರ್ನಾಟಕ, ಭಾರತ

---

ಇಷ್ಟುದಿನ ಹಕ್ಕಿಗಳ ಚಿಲಿಪಿಲಿ ಕೇಳುತ್ತಿದ್ದ **ಅರ್ಕಧಾಮದಲ್ಲಿ** ಈಗ ಚಿಣ್ಣರ ಚಿಲಿಪಿಲಿ ಶುರುವಾಗಿದೆ. ಹೌದು, ಅರ್ಕಧಾಮದಲ್ಲಿ **ಅರ್ಕ ಮಹಾವಿದ್ಯಾಲಯ** ಪ್ರಾರಂಭವಾಗಿದೆ.

ದಿನಾಂಕ **19.05.2022**ರ ಶುಭ **ಗುರುವಾರ** ಈ ಶಾಲೆಗೆ ಮುಹೂರ್ತ ಕೂಡಿ ಬಂದಿತ್ತು. **ಅರ್ಕ ಮಹಾಗಣಪತಿಯ** ಕೃಪೆ ಹಾಗೂ **ಯೋಗಿ ಶ್ರೀನಿವಾಸ ಅರ್ಕ** ಅವರ ಮಾರ್ಗದರ್ಶನದಲ್ಲಿ **ಬೆಳಿಗ್ಗೆ 10 ಗಂಟೆಯ** ಶುಭ ಘಳಿಗೆಯಲ್ಲಿ **ಶ್ರೀ ಅರ್ಕ ಮಹಾಗಣಪತಿ** ಹಾಗೂ **ವಿದ್ಯಾ ಅಧಿದೇವತೆ ಶ್ರೀ ಸರಸ್ವತಿ** ಪೂಜೆಯೊಂದಿಗೆ ಮಕ್ಕಳಿಗೆ ಗುರುಮಂತ್ರ ಹೇಳಿಕೊಟ್ಟು ಶಾಲೆಗೆ ಶ್ರೀಕಾರ ಹಾಡಲಾಯಿತು. **ಪ್ರಿ.ಕೆ.ಜಿ., ಎಲ್.ಕೆ.ಜಿ. ಮತ್ತು ಯು.ಕೆ.ಜಿ.** ತರಗತಿಗಳಿಂದ ಶುರುವಾದ ಶಾಲೆಯಲ್ಲಿ ಪುಟಾಣಿಗಳೆಲ್ಲರೂ ಸಂತೋಷದಿಂದಲೇ ಪಾಲ್ಗೊಂಡರು. ಪೂಜಾದಿಗಳ ನಂತರ ಎಲ್ಲರಿಗೂ ಪ್ರಸಾದ ವಿತರಣೆ ಮಾಡಲಾಯಿತು. **ಶ್ರೀ ವೆಂಕಟೇಶ್** ಮತ್ತು **ಶ್ರೀ ಚೇತನ್** ಅವರು ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕ ಜ್ಞಾನ ಮತ್ತು ಅನುಭವದೊಂದಿಗೆ ಶಾಲೆಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ.

ಈ ಶಾಲೆಯಲ್ಲಿ ಮಕ್ಕಳಿಗೆ **ಆಧುನಿಕ ಶಿಕ್ಷಣದ** ಜೊತೆಗೆ ಗುರುಕುಲ ಮಾದರಿಯಲ್ಲಿ **ಸಂಸ್ಕೃತ, ಸಂಗೀತ, ಲಲಿತ ಕಲೆಗಳನ್ನು** ಕಲಿಸಬೇಕು ಅನ್ನೋದು **ಯೋಗಿ ಶ್ರೀನಿವಾಸ ಅರ್ಕ** ಅವರ ಆಶಯ. ಅವರ ಆಶಯದಂತೆ ಶಾಲೆ ಪ್ರಾರಂಭವಾಗಿದ್ದು, ಮಕ್ಕಳಿಗೆ **ಭಾರತೀಯ ಸಂಸ್ಕಾರ, ಸಂಸ್ಕೃತಿಗಳ ಪರಿಚಯ** ಮಾಡಿಕೊಡಲಾಗುತ್ತದೆ.

---













Arka Website
www.srinivasarka.org

Arka Foundation
www.arkafoundationindia.org

SRINIVAS ARKA

Arka Videos
www.atharvavani.com

Arka Search Engine
www.yajurvani.com

SrinivasArkaOfficial

SrinivasArkaOfficial

SrinivasArka